# ನಾಟಕ ಸಂಗೀತ

ಭರತನ ನಾಟ್ಯಶಾಸ್ತ್ರದಲ್ಲಿ ಹತ್ತು ರೂಪಕಗಳನ್ನು ಹೇಳಿದೆ. ಅವುಗಳಲ್ಲಿ ಒಂದೆಂದು 'ನಾಟಕ'ವನ್ನು ಕೂಡ ಹೇಳಿದೆ. ನಾಟ್ಯಶಾಸ್ತ್ರದಲ್ಲಿರುವ ನಾಟಕದ ರೂಪವು ಅಂಕನಿರ್ದೇಶಿತ, ಮತ್ತು ವಿವಿಧ ಭಾವನಿರ್ಯುಕ್ತ.

ಆದರೆ ಇಂದು ನಾವು ನೋಡುತ್ತಿರುವ, ಆಡುತ್ತಿರುವ ನಾಟಕಗಳಿಗೂ ಅಲ್ಲಿ ಹೇಳಿರುವುದಕ್ಕೂ ಸ್ವಲ್ಪ ವೆತ್ಯಾಸವಿದೆ. ಸಮಸಾಮಯಿಕ ನಾಟಕವು ನಾಟ್ಯಶಾಸ್ತ್ರದ ಹತ್ತೂ ರೂಪಕಗಳ ವೈವಿಧ್ಯತೆಗಳ ಸಾರಾಂಶವೂ ಆಗಿರಬಹುದು ಅಥವ ಅಂಶರೂಪವೂ ಆಗಿರಬಹುದಾಗಿದೆ. ನಾಟ್ಯಶಾಸ್ತ್ರದ ಅಂಕಗಳು, ವೃತ್ತಿಗಳು, ಭಾವಗಳು, ರಸಪ್ರಕ್ರಿಯೆ, ಇತ್ಯಾದಿಗಳು ನಮ್ಮೀ ನಾಟಕದಲ್ಲಿ ಒಂದಲ್ಲೊಂದೆಡೆ ಕಂಡುಮಿಂಚಿ ಮಾಯವಾಗುತ್ತಿದೆ. ನಾಟಕದ ಕಥಾವಸ್ತುವಿನ ವಿಸ್ತಾರ, ಅಭಿಪ್ರಾಯದ ವಿಚಾರ, ಭಾವಗಳ ಉದ್ವೇಗ, ಜನಾಂಗೀಯ ಧ್ಯೇಯಧೋರಣೆಗಳ ಅಭಿವ್ಯಕ್ತಿಶಕ್ತಿ ಇತ್ಯಾದಿಗಳ ಹರಹು ಆಯಾ ರಾಜ್ಯರಾಷ್ಟ್ರಗಳ ಸಾಂಸ್ಕೃತಿಕ ಹಾಗೂ ರಾಜಕೀಯ ಎಲ್ಲೆಗಳನ್ನು ಮೀರಿಮೀರಿ ವಿಶ್ವದಷ್ಟೇ ಸವಿಸ್ತಾರವಾಗಿದೆ. ಹೀಗಾಗಿ, ನಾಟಕರಂಗಕೃತಿಯನ್ನು ಕೇವಲ ಅದು ನಡೆಯುವ ಜಾಗಕ್ಕೆ ಸೀಮಿತಗೋಳಿಸಲಾಗುತ್ತಿಲ್ಲ. ಜಗತ್ತಿನಲ್ಲಿ ನಡೆದದ್ದೆಲ್ಲ, ನಡೆಯುವುದೆಲ್ಲ, ನಡೆಯಲಿರುವುದೆಲ್ಲದರ ಅಂಶಗಳು ನಾಟಕ ರಂಗಕ್ಕೆ ಸೀಮಿತಗೊಳಿಸಲು ಇಂದು ಹೆಣಗಾಡುತ್ತಿದ್ದಾರೆ ರಂಗಕರ್ಮಿಗಳು. ಇವುಗಳಲ್ಲಿ ಆನುಷಂಗಿಕವಾಗಿ ಬಂದು ಸೇರಿಕೊಂಡಿರುವುದು ನಮ್ಮ ಸಂಗೀತ.

ಭಾರತದಲ್ಲೇ ಏನು ವಿಶ್ವದಲ್ಲೇ ಸಂಗೀತಶಬ್ದಕ್ಕೆ ಹೊಸಹೊಸ ಅರ್ಥಗಳನ್ನು ನೀಡಲು ಕ್ಷೇತ್ರ ಪ್ರಯತ್ನಿಸುತ್ತಿದೆ. ಸಂಗೀತದ ಮೂಲಭೂತ ಪ್ರಕ್ರಿಯೆಯಾದ ಶ್ರುತಿ ಮತ್ತು ಲಯವನ್ನೇ ಪುನಃ ಅವಲೋಕಿಸಿ ಪುನಾರಚಿಸಲು ಹವಣಿಸುತ್ತಿದೆ. ಹಾಡನ್ನು ಆಡಿ, ಆಡಿದ್ದೆಲ್ಲ ಹಾಡೆಂದು ಅಥವಾ ಮಾನವನ – ಪ್ರಾಣಿವರ್ಗದ – ಪ್ರಕೃತಿಯಲ್ಲಿ ಕೇಳುವ – ಮಾನವನಿರ್ಮಿತವಾದ ಎಲ್ಲ ಧ್ವನಿನಾದವನ್ನೂ ಹಾಡಿ (ಚೆಕೊವಸ್ಕೀ ಎಂಬುವವ ಗಾಜು ಒಡೆದ, ಕೋಲುತಟ್ಟಿದ, ಗಂಟಲು ಸರಿಮಾಡಿಕೊಂಡ, ಕೆಕ್ಕರಿಸಿದ, ಪ್ರಾಣಿಹತ್ಯೆಯಾಗುವ ವೇಳೆಗೆ ಕೇಳುವ ಆರ್ತಧ್ವನಿಯ, ಕೊಳಚೆನೀರಿನ ಹರಿವ ಗದ್ದಲದ, ಹೀಗೆ ಅದೆಷ್ಟೋ ಜಗತ್ತಿನ ಗದ್ದಲದ ಧ್ವನಿಗಳನ್ನೇ ನಾದವೆಂದು ಬಗೆದು ಅವುಗಳನ್ನೇ ಶ್ರೇಣಿಯಲ್ಲಿಟ್ಟು ಒಂದು ಸಿಂಫೋನೀಯನ್ನು ರಚಿಸಿದ. ತನ್ನ ಪಿಯಾನೋವನ್ನೂ ಅದರಲ್ಲಿಟ್ಟ, ಆದರೆ ಅದರ ಕೀಲಿಮಣೆಗಳನ್ನು ಒತ್ತುವುದಕ್ಕಲ್ಲ, ಬದಲಾಗಿ ಅದರ ವಿವಿಧಜಾಗಗಳನ್ನು ಬಡಿದು ಮಧ್ಯಮಧ್ಯೆ ದಢಕ್ಕನೆ ಮೇಲೆದ್ದು ಕೂಗಲು !) – ಆಡಲು ಪ್ರಯತ್ನಿಸುತ್ತಿದೆ ವಿಶ್ವನಾಟಕರಂಗ. ಇದನ್ನು ಕೆಲವು ಸಮಸಾಮಯಿಕರು ನಾಟಕರಂಗಕ್ಕೆ ಇದೊಂದು ಹೊಸಉದ್ದೀಪನ, ನಾಟಕದ ಕಥಾವಸ್ತುವನ್ನು ಮೆರಗುಗೊಳಿಸುವ ತಲುಪಿಸುವ ಸಾಧನ ಎಂದೆಲ್ಲ ಸ್ವಾಗತಿಸಿದರೆ, ಸಾಂಪ್ರದಾಯಿಕರು ಇದೊಂದು ಕೇವಲ ಕಾಮಚಾರ, ಅವಿಚಾರರಮಣೀಯ, ನಮ್ಮವರಿಗೆ ಅರ್ಥವಾಗಬೇಕಿದ್ದರೆ ನಮ್ಮ ಸಂಸ್ಕೃತಿಯ ನೆಲೆಗಟ್ಟಿನಲ್ಲೇ ನಾಡುನುಡಿಗಳ ಚೌಕಟ್ಟಿನಲ್ಲೇ ವಿಚಾರಪ್ರತಿಬಿಂಬ ಆಗಬೇಕು ಆದುದರಿಂದ ಇವೆಲ್ಲ ಅನ್ಯಸಂಸ್ಕೃತಿಗಳಿಂದ ಪ್ರಭಾವಿತ ಅಸಂಬದ್ಧ ಎಂದು ಮೂಗೆಳದಿದ್ದಾರೆ.

ಆದರೆ ಭಾರತದಲ್ಲಿ ಇಷ್ಟೊಂದು ಸ್ವಚ್ಛಂದ ಮನೋಭಾವ ರೂಢಿಸಿಲ್ಲದಿರುವುದಕ್ಕೆ ಕಾರಣ ನಮ್ಮ (ಮಾರ್ಗ ಹಾಗೂ ದೇಸೀ) ಸಂಗೀತದ ಇತಿಹಾಸ. ನಮ್ಮ ಸಂಗೀತವು ಕಿವಿಯ ಮೂಲಕ ಹೊಕ್ಕು ಹೃದಯವನ್ನು ತಲುಪಿ ಕಲಕಿ ರಂಜಿಸುವುದಕ್ಕೆ ಮಾತ್ರ ಸೀಮಿತವಾಗದೆ, ಮುಂದುವರೆದು ಜೀವವನ್ನು ಪ್ರಚೋದಿಸಬೇಕು ಎಂದೆಲ್ಲ ಅಂದುಕೊಂಡು ನಮ್ಮ ಪೂರ್ವಜರು ಅನೇಕ ವಿಧಿವಿಧಾನಗಳನ್ನು ಸಂಗೀತದ ಪ್ರವೇಶದಿಂದ ಪ್ರಯೋಗದವರೆಗೆ ಏರ್ಪಡಿಸಿ ಅನುಸ್ಥಾಪಿಸಿ ರೂಢಿಸಿಬಿಟ್ಟರು. ಇದಕ್ಕೆ ಕಾರಣವೂ ಇದೆ. ಕೇವಲ 1000 ವರ್ಷಗಳ ಇತಿಹಾಸವನ್ನೇ ಒಮ್ಮೆ ಅವಲೋಕಿಸಿದಾಗ ಇದು ತಿಳಿಯುತ್ತದೆ. ಭಾರತವು ವಿವಿಧ ರಾಜಕೀಯ ವಲಯಗಳಾಗಿ ಏರ್ಪಟ್ಟಾಗ ಅದರ ಸಮಗ್ರತೆಗೆ ಒಂದು ಏಕಸೂತ್ರತೆ ಬೇಕಿತ್ತು. ವೇದಪುರಾಣೇತಿಹಾಸಗಳೆಲ್ಲವೂ ತಂತಮ್ಮ ಕಾಲದೇಶಗಳಿಗೆ ಅನುಗುಣವಾಗಿ ಸ್ಥಳವೇದಪುರಾಣೇತಿಹಾಸಗಳಾಗಿ ಮಾರ್ಪಡುತ್ತಿದ್ದರೂ ಅವುಗಳ ಆತ್ಮ ಒಂದೇ ಆಗಿದೆ. ಇದೇ ಸಂಸ್ಕೃತಿ ಎಂದು ಬಗೆದು ಇದರಲ್ಲಿ ಅತ್ಯಂತ ಸರಳವಾದ ಸೂತ್ರವೊಂದನ್ನು ಕಂಡು ಎತ್ತಿಹಿಡಿದರು. ಇದೇ ಸೌಂದರ್ಯದ ಅನುಭೂತಿಯ ಹಿನ್ನೆಲೆಯಲ್ಲಿನ 'ರಸ'ಪ್ರಕ್ರಿಯೆ ('ನವ' ರಸವೆಂಬುದು ನಂತರದ ಆವಿಷ್ಕಾರಮಾತ್ರ). ಇದಕ್ಕೇ ಭಾರತೀಯರ ಭಕ್ತಿಶರಣತೆಗಳ ಆವೇಶವೇಶಗಳು. 'ರಸ'ದಲ್ಲೇ ಎಲ್ಲ ಸ್ತರಗಳ ಉಗಮ, ವಿಕಾಸ ಮತ್ತು ತಿರೋಧಾನ. ರಸಕ್ಕಾಗಿಯೇ ಎಲ್ಲದರ ನಿಷ್ಪತ್ತಿ. ರಸದೆಡೆಗೇ ನಮ್ಮೆಲ್ಲ ಪ್ರಜ್ಞೆ, ರಸ ಎಂಬುದು ಪಂಡಿತಪಾಮರಾದಿಯಾಗಿ ಎಲ್ಲರಿಗೂ ತಕ್ಷಣವೇ ತಿಳಿದು ಅನುಭವಕ್ಕೆ ಬರುವಂತಹದು. ಇಂತಹ ರಸವನ್ನು ಅನುಭವಿಸಲು ನಮ್ಮ ನೆಲಜಲದ ಸಂಸ್ಕಾರವೊಂದಿದ್ದರೆ ಸಾಕು ; ಅನ್ಯ ಸಂಸ್ಕಾರಗಳನ್ನೋ ಅಥವಾ ವಿಚಾರಸರಣಿಗಳನ್ನೋ

ಅನುಸರಿಸಿದರೆ ಆಗ ರಸ ಭಂಗವಾಗುತ್ತದೆ ; ಎಂದೆಲ್ಲ ನಿರೂಪಿಸಿದರು ಮತ್ತು ಸಿದ್ಧಾಂತಗೊಳಿಸಿದರು, ಆದರೂ, ಅನ್ಯಸಂಸ್ಕೃತಿಗಳ ಉತ್ತಮ ಅಂಶಗಳನ್ನು ತಿರಸ್ಕರಿಸಲಿಲ್ಲ. ಅವೆಲ್ಲವನ್ನೂ ಸಾರವತ್ತಾಗಿ ತಿಳಿದು ನಮ್ಮದನ್ನಾಗಿಸಿದರು.

ಸಂಗೀತದ ಸ್ವರೂಪವೇ ಅಮೂರ್ತವಾದುದು, ಎಂದರೆ, ಅದಕ್ಕೊಂದು ನಿಖರವಾದ 'ಅರ್ಥ'ವನ್ನು ಕೊಡಲು ಆಗುವುದಿಲ್ಲ. ವಿಶ್ವದಲ್ಲಿ 'ಕೇಳಿಸ'ಬಹುದಾದ ನಾದಕ್ಕೆ ಅದು ಹುಟ್ಟಿಕೊಳ್ಳುವ ಪ್ರಸಂಗದ ಸೋಂಕನ್ನು ಇಟ್ಟುಕೊಂಡು ಒಂದಿಲ್ಲೊಂದು 'ಅರ್ಥ' ಕೊಡಬಹುದೇನೋ. ಆದರೆ, ಅದೇ ನಾದವು ಕಾಲದಲ್ಲಿ ದೇಶದಲ್ಲಿ ಮುಂದುವರೆದಾಗ ಅದರ ಪ್ರಸಂಗವು ಕರಗಿಹೋಗುತ್ತದೆ. ನಾದಲಯಗಳೆರಡೇ ಉಳಿಯುತ್ತವೆ, ಶ್ರವಣರಮ್ಯವಾಗುತ್ತದೆ. ಆಗ ಅದರ ಪೂರ್ವೇತಿಹಾಸದ ಅರ್ಥವನ್ನು ನೀಡಹೊರಟರೆ ಸಮಸಾಮಯಿಕವಾಗಿ ಅನರ್ಥವಾಗುತ್ತದೆ, ನಗೆಪಾಟಲಾಗುತ್ತದೆ ಅಲ್ಲವೆ. ಹೀಗಾಗದಿರಲೆಂದು ಭಾರತೀಯರು ನಾದಲಯಗಳಿಗೆ ಸಾಹಿತ್ಯವನ್ನು ಜೋಡಿಮಾಡಿದರು. ಸಂಗೀತಕ್ಕೆ ಸ್ವರಲಯಗಳಾದರೆ ಸಾಹಿತ್ಯಕ್ಕೆ ಧ್ವನಿವ್ಯಾಕರಣಗಳು. ಹೀಗೆ ಒಂದಕ್ಕೊಂದು ಸಮರಸವಾಗಿ ಹೆಣೆದುಕೊಂಡಾಗ ಅದು ಸಮ್ಯಗ್ (ಸಂಪೂರ್ಣವಾಗುವುದೇ ಅದರ ಸುಶೀಲತೆಯಾಗುವ) ಗೀತವಾಗಿ ಸಂಗೀತವಾಗುತ್ತದೆ. ಇದು ನಾಟಕದ ಸಂದರ್ಭದಲ್ಲೂ ಅನ್ವಯಿಸಬಹುದು. ಕೆಲವುವೇಳೆ ಗೀತಸಾಹಿತ್ಯವಿಲ್ಲದೆಯೇ ಕೇವಲ ಸ್ವರಗಳೇ ಇದ್ದರೂ ಅದು ಸಹೃದಯರಲ್ಲಿ ಒಂದಿಲ್ಲೊಂದು ಸಾಹಿತ್ಯಾಕ್ಷರವಾಗಿಯೇ (ಉದಾ. ಸರಿಗಮಪದನಿ!) ಅನುರಣಿಸಬಹುದು.  ಅಥವಾ ನಿರಕ್ಷರಸ್ಥರಲ್ಲಿ ಅದೊಂದು ಈ ಹಿಂದೆ ಕೇಳಿದ ಮಾತಿನ–ಗೀತದ–ಪ್ರಸಂಗದ ಭಾಷಾಧ್ವನಿಯಾಗಿರಬಹುದು.

ನಮ್ಮ ನಾಟಕಕ್ಕೆ ಸಂಗೀತವು ಹೇಗಿರಬೇಕು ?

ಶ್ರೋತೃಗಳಿಂದ ಹಿಡಿದು ಸಂಗೀತ ಸಂಯೋಜಕರವರೆಗೆ ಈ ಪ್ರಶ್ನೆ ಅನ್ವಯಿಸುತ್ತದೆ. ನಾಟಕದ ಕಥಾವಸ್ತುವಿಗೆ, ವಿಚಾರಸರಣಿಗೆ, ನಾಟಕಚಲನೆಯ ವೇಗ ಆವೇಗಗಳಿಗೆ, ದೇಶಕಾಲಗಳಿಗೆ ಅನುಗುಣವಾಗಿರಲೇ ಬೇಕು ಎಂಬುದಂತೂ ನಿರ್ವಿವಾದ.  ನಾಟಕವು ರಸಿಕರಂಜನೆಗೋ ತೆವಲುಸಂಪೂರ್ತಿಗೋ ಮಾಹಿತಿಪ್ರಸಾರಕ್ಕೋ ಉತ್ತೇಜಕ ಮತ್ತು ಉದ್ವಿಗ್ನಗೊಳಿಸಲಿಕ್ಕೋ ಎಂಬುದೊಂದು ನಿರ್ಧಾರವಾದರೆ ಸಾಕು, ಸಂಗೀತಸಂಯೋಜಕರ ಕೆಲಸ ಅಷ್ಟಿಷ್ಟು ಸುಲಭ.

ನಾಟಕಸಂಗೀತವು ಎಂತಹ ಶೈಲಿಯಲ್ಲಿರಬೇಕು ?

ಹಿಂದೂಸ್ಥಾನೀ ಸಂಗೀತದ ಸ್ವರನಿಖರತೆಯಲ್ಲಿನ ಮಾರ್ದವತೆ, ಸರಳತೆ, ಅನುಕರಣೀಯತೆ (ಹಿಂದೂಸ್ಥಾನೀ ಸಂಗೀತವಲಯಗಳಲ್ಲಿ ಆಡುತ್ತಿದ್ದ ನಾಟಕಗಳಲ್ಲಿ ಇದರ ಪ್ರಯೋಗ ಹೆಚ್ಚಾಗಿರುತ್ತಿದ್ದು ಅದೊಂದು ವಿಭಿನ್ನ ಶೈಲಿಯ ನಾಟಕಸಂಗೀತವೇ ಆಗುತ್ತಿದ್ದ ಕಾಲ ಹಿಂದಿತ್ತು (ಹಿಂದೂಸ್ಥಾನೀ ರಂಗಸಂಗೀತದ ಮೂಲವೂ ಕರ್ನಾಟಕ ಶಾಸ್ತ್ರೀಯಸಂಗೀತವೇ) : ಈಗೀಗ ಅದು ಕರಗುತ್ತಿದೆ); ಕರ್ನಾಟಕ ಶಾಸ್ತ್ರೀಯ ಸಂಗೀತದ ಸಾಂಪ್ರದಾಯಿಕ ಗಮಕಪ್ರಕ್ರಿಯೆಯ ಸೊಗಡು, ಹಾಡಲು ಸುಲಭವಾಗುವಂತಹ ತಾಲಲಯಗಳು, ವಾದ್ಯದ ಧ್ವನಿವಿಶೇಷತೆಗಳು, ಭಾಷಾಗೌರವದ ಗಂಭೀರತೆ, ಭಕ್ತಿಯೇ ಅದರ ಮೂಲಭೂತ 'ರಸ'ವಾಗಿರುವುದರಿಂದ ಅದಕ್ಕೊಂದು ಸಂಭಾವ್ಯತೆ, ಸಮಾಜದ ಎಲ್ಲ ಸ್ತರದ ಜನರ ಸ್ವಭಾವಕ್ಕೆ ಅನುಗುಣವಾಗಿ ಅವರವರ ಭಾವಗಳ ಅಭಿವ್ಯಕ್ತಿಯಲ್ಲೂ ಅದೊಂದು ಗಾಂಭೀರ್ಯ ('ಪೋಲೀ' ಸಾಹಿತ್ಯಕ್ಕೂ ತೋಡೀ ರಾಗದ ಗಾಂಧಾರಧೈವತ ಗಮಕಗಳನ್ನು ಹಾಕಿದರೆ, ಅದೊಂದು ಪರಿಹಾಸವೋ ಅಥವಾ ಅಸಹ್ಯಲಜ್ಜೆಯನ್ನು ಉಂಟುಮಾಡದ ಸಂಗತಿಯಾಗಬಹುದು!) (ಅಂತೆಯೇ, ಕರ್ನಾಟಕ ಸಂಗೀತವಲಯಗಳಲ್ಲಿ ವೃತ್ತಿನಿರತ ನಾಟಕರಂಗದಲ್ಲಿ ಶಾಸ್ತ್ರೀಯಸಂಗೀತದ ತತ್ತ್ವಗಳನ್ನು ಆದರಿಸಿ ನಾಟಕಸಂಗೀತರಚಿಸುತ್ತಿದ್ದರೂ ನಾಟಕಸಂಗೀತಪ್ರಸಂಗಗಳ ಕಾರಣದಿಂದ ಅದರದೇ ಆದ ಸ್ವಂತಿಕೆಯನ್ನು ರೂಢಿಸಿಕೊಂಡು ಜನಮನದಲ್ಲಿ ಅಚ್ಚುಮೆಚ್ಚಾಗಿದ್ದ ಸಂಗೀತಶೈಲಿಯು ಇಂದು ನಿಧಾನವಾಗಿ ಸದ್ದಡಗುತ್ತಿದೆ) ; ಸುಗಮಸಂಗೀತದಂತಾದರೆ ಅಲ್ಲಿನ ವಾದಿಸಂವಾದಿಸ್ವರಗಳ ರಂಜನೀಯತೆ, ಲೀಲಾಜಾಲವಾಗಿ ರಾಗದ ಚೌಕಟ್ಟನ್ನು ಅಲ್ಲಲ್ಲಿ ಮೀರಿದಂತೆ ತೋರಿದ ಹೊಸತನದ ಸೊಗಡು ; ದೇಸೀ ಸಂಗೀತವಾದರೆ ಆಶುಸ್ಫೂರ್ತಿ ಮತ್ತು ಏಕತಾನತೆಯ ಅವಕಾಶ (ಹೀಗಾಗಿ ಅಭಿವ್ಯಕ್ತಿ ವೈವಿಧ್ಯತೆಯ ಸ್ವಾತಂತ್ರ್ಯ) ; ವಿದೇಶೀ ಸಂಗೀತವಾದರೆ ನವೀನತೆಯ ಜನಪ್ರಿಯತೆ, ಅಬ್ಬರದ ಲಯಗಾರಿಕೆ, ಸಮವಿಷಮವೆಂಬ ಚೌಕಟ್ಟೇ ಇಲ್ಲದೆ ಇಟ್ಟದ್ದೇ ಹೆಜ್ಜೆಯಾಗಿ ಶರೀರವನ್ನು ಆಕ್ಷಣದಲ್ಲಿ ಬೇಕುಬೇಕಾದಂತೆ ಕೊಂಕಿಸಿ, ಉದ್ರೇಕಿಸಿ, ಬೆವರಿಳಿದು, ಬೆವರಿಳಿಸಬಹುದಾದ (ಆಹ್ಲಾದಕರ) ಅನುಕೂಲತೆ (ಇದೀಗ ಪಾಪ್ಯುಲರ್) ; ಇತರಸಂಸ್ಕೃತಿಗಳ 'ದೇಸೀ' ಸಂಗೀತವಾದರೆ ನವೀನತೆಯ ಹಾಗೂ ಇಲ್ಲಿಯವರೆಗೂ ಅಪ್ರಕಟಿತವಾದ ಹೊಸಮಜಲಿನ, ಅರ್ಥವಾಗದ ಗೋಜಲಿನ, ಶ್ರೋತೃಗಳು ಅವರವರಿಗೆ ತೋಚಿದ ಆಕ್ಷಣದ ಭಾವನೆಗಳನ್ನು ಮಾಡಿಕೊಳ್ಳಬಹುದಾದ ಅನುಕೂಲತೆಗಳು (ನವೀನರು ಹಾಗೂ 'ವಿಚಾರಪರರು' ಈ ಶೈಲಿಗೆ

ಶರಣುಹೊಡೆದಂತೆ ಕಾಣುತ್ತಿದೆ) ; ಹೀಗೆ, ನಾಟಕರಂಗದಲ್ಲಿ ಇವೆಲ್ಲವೂ ಇಂದು ಅನ್ವಯವಾಗುತ್ತಿದೆ. ಅಷ್ಟೇ ಅಲ್ಲ ; ಇವೆಲ್ಲ ಶೈಲಿಗಳ ಹಲವು ಅಂಶಗಳನ್ನು ಪ್ರಯೋಗಾತ್ಮವಾಗಿ (ಉದಯೋನ್ಮುಖರು) ಇಂದು ಬೆಳಸುತ್ತಿದ್ದಾರೆ.

ನಾಟಕ ಸಂಗೀತ : ಧ್ವನಿಮುದ್ರಿತ – ಆಕ್ಷಣಪ್ರಸ್ತುತಿ : ಪರವಿರೋಧ

ನಾಟಕವಿದ್ದಾಗ ಸಂಗೀತವು ಹೊಮ್ಮಿಕೊಳ್ಳುವುದಲ್ಲದೆ ತದನಂತರವೂ ಶ್ರೋತೃಗಳಲ್ಲಿ ಗುನುಗುಡುತ್ತದೆ. ಹಾಡಲಾಗದವರು ಅದನ್ನು ಮತ್ತೊಮ್ಮೆ ಕೇಳುವ ತವಕಪಟ್ಟಾಗ ನಾಟಕಸಂಗೀತದ ಧ್ವನಿಮುದ್ರಣದ ಬಯಕೆ ತೋರುತ್ತದೆ. ಆದರೆ ಇದು ಕೇವಲ ಶ್ರೋತೃಗಳ ತವಕಮಾತ್ರವಲ್ಲದೆ ನಾಟಕಕಾರರ ಅನುಕೂಲವೂ ಆದಾಗ ಇಡೀ ನಾಟಕಸಂಗೀತವನ್ನು ಪೂರ್ವೀಭಾವಿಯಾಗಿ ಧ್ವನಿಮುದ್ರಿಸಿಟ್ಟುಕೊಳ್ಳುವ ವಿಚಾರಕ್ಕೆ ಮಾನ್ಯತೆ ದೊರಕುತ್ತದೆ.

ನಾಟಕನಡೆಯುವ ತಕ್ಷಣಕ್ಕೆ ಸಂಗೀತವನ್ನು ಏರ್ಪಡಿಸುವುದು ಒಳ್ಳೆಯದೇ. ಏಕೆಂದರೆ ಸಂಗೀತವು ಆಕ್ಷಣಕ್ಕೆ ಹೊಮ್ಮಿದರೆ ಅದರ ಸೊಗಡು –ಸೊಗಸು. ಇಂತಹ ಸಂಗೀತದಲ್ಲಿ ಕೆಲವು ಕೊರತೆಗಳು, ತಪ್ಪುನೆಪ್ಪುಗಳು, ಆಭಾಸಗಳು, ಸಂದರ್ಭೋಚಿತವಾದ ಸಂದುವಿಕೆ (ಸಿಂಕಿಂಗ್!) ಇತ್ಯಾದಿಗಳು ಸರಿಯಾಗಿ ಆಗದಿದ್ದರೂ ಸಹ, ಸಂಗೀತವು ನಾಟಕದ ತಕ್ಷಣದ ಉತ್ಸಾಹಕ್ಕೆ ಇಂಬುಗೊಟ್ಟು ಜೊತೆಸೇರಿ ರಸಿಕರಂಜನೆಯಾಗುತ್ತದೆ. ಆದರೆ, ಇವೆಲ್ಲವನ್ನೂ ಏರ್ಪಡಿಸುವುದಕ್ಕೆ ಹಲವಾರು ಅನುಕೂಲತೆಗಳು ಬೇಕು (ಸಂಗೀತವು ಶ್ರವಣರಮ್ಯವಾಗಬೇಕಿದ್ದರೆ ಶ್ರವಣವರ್ಧಕಗಳು ಚೇಷ್ಟೆಮಾಡಬಾರದು ! ಇತ್ಯಾದಿ). ಇದೇ ಕಷ್ಟಕರಸಂಗತಿ ! ಆಶುಸಂಗೀತದ ಹೊನಲು ಇಂದು ನಮ್ಮ ನಾಟಕರಂಗದಲ್ಲಿ ಹರಿಯದಿರುವುದಕ್ಕೆ ಇನ್ನೊಂದು ಮುಖ್ಯಕಾರಣ : ನಮ್ಮ ನಟರು ಸಂಗೀತಗಾರರೂ ಆಗದಿರುವುದು (ಮೈಸೂರೊಡೆಯರ ಕಾಲದಲ್ಲಿ ಇದಕ್ಕೊಂದು ಉಪಾಯಕಂಡುಕೊಂಡಿದ್ದರು. ಆಸ್ಥಾನವಿದ್ವಾಂಸರನ್ನೇ ನಟರನ್ನಾಗಿಯೂ ಇಟ್ಟುಕೊಳ್ಳುತ್ತಿದ್ದರು. ಅವರ ಅಭಿನಯವು ಅದುಹೇಗೇ ಇರಲಿ, ಸಂಗೀತವು ಶ್ರೋತೃಗಳಿಗೆ ಅಚ್ಚುಮೆಚ್ಚಾಗುತ್ತಿತ್ತು. ಸಂಗೀತಗಾರರಂತು 'ಒನ್ಸ್‌ಮೋರ್‌ಗಳಿಗೆ' (ನಾಟಕಪ್ರಸಂಗದಲ್ಲಿ ಸತ್ತನಂತರವೂ) ತಕ್ಷಣವೇ ಮೇಲೆದ್ದು ಇನ್ನೂ ಉತ್ಕಂಠದಿಂದ ಹಾಡಿನಲಿದಾಡಿ ನಂತರ ನಿಧಾನವಾಗಿ (ಸಾಯುತಿದ್ದರು!) ನಿರ್ಗಮಿಸುತ್ತಿದ್ದರು). ಇದರಿಂದಾಗಿ ಇಂದು ಹಲವರು ತಮ್ಮ ನಾಟಕಗಳಿಗೆ ಅಡಕಮುದ್ರಿತ ಸಂಗೀತವನ್ನು ಅಪೇಕ್ಷಿಸುತ್ತಿದ್ದಾರೆ. ಇದು ಸಹಜಾನುಕೂಲವೂ ಸೈ ವಿತ್ತಾನುಕೂಲವೂ ಸೈ !

**ಸ್ವರಾಸನ** (ರಾ.ಸ.ನಂದಕುಮಾರ)